**ಓ.ಎಸ್.ನಂಃ 166/2020**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 18.02.2026 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ವಾದ ಪತ್ರ ಖಂಡಿಕೆ 2 ರಲ್ಲಿ ನಮೂದಿಸಿರುವ ವಂಶವೃಕ್ಷ ದಾಖಲೆಯನ್ನು ತಹಶೀಲ್ದಾರ್ ರಿಂದ ಪಡೆದಿಲ್ಲ. ಸಿದ್ದಮ್ಮ ರಾಮೇಗೌಡರ ಮೊದಲನೇ ಹೆಂಡತಿ ಮತ್ತು ಅವರ ಮಗ ಸಣ್ಣೇಗೌಡ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಪಕ್ಷಗಾರರ ಆದಾರ್ ಕಾರ್ಡ್ ಸಿಗದ ಕಾರಣ ನಾನು ತಹಶೀಲ್ದಾರ್ ರಿಂದ ವಂಶವೃಕ್ಷವನ್ನು ಪಡೆಯಲು ಆಗಲಿಲ್ಲ. ನಾನು ವಂಶವೃಕ್ಷದಲ್ಲಿ ಮೃತರಾಗಿರುವವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನ್ನ ಬಳಿ ಆ ದಾಖಲೆಗಳು ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಮೂಲತಃ ಸಣ್ಣೇಗೌಡರಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ ಸರಿ. ಆ ಕುರಿತು ಸಾಗುವಳಿ ಪತ್ರವನ್ನು ಹಾಜರುಪಡಿಸಿಲ್ಲ. ಸಣ್ಣೇಗೌಡ ಮತ್ತು ಆತನ ಹೆಂಡತಿ ಕಾಳಮ್ಮ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ.

ರಾಮೇಗೌಡರವರ ಎರಡನೇ ಹೆಂಡತಿ ಮಾದಮ್ಮರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ. ರಾಮೇಗೌಡರವರ ಎರಡನೇ ಹೆಂಡತಿ ಮಾದಮ್ಮರವರಿಗೆ ಐದು ಜನ ಮಕ್ಕಳು. ಅವರ ಹೆಸರನ್ನು ವಾದ ಪತ್ರದ ಖಂಡಿಕೆ ಎರಡರಲ್ಲಿ ನಮೂದಿಸಲಾಗಿದೆ. ರಾಮೇಗೌಡರವರ ಎರಡನೇ ಹೆಂಡತಿ ಮಾದಮ್ಮರವರ ಮಕ್ಕಳಾದ ಸಿದ್ದಮ್ಮ ಮತ್ತು ಚಿಕ್ಕಲಿಂಗೇಗೌಡ, ದಾವೆ ಹೂಡಿದ ನಂತರ ಮರಣ ಹೊಂದಿದ್ದಾರೆ. ಸಿದ್ದೇಗೌಡ ಮತ್ತು ನನ್ನ ತಂದೆ ದೊಡ್ಡಲಿಂಗೇಗೌಡ ದಾವೆ ಹೂಡುವ ಮೊದಲೆ ಮರಣ ಹೊಂದಿದ್ದಾರೆ. ಸಿದ್ದೇಗೌಡ, ಸಿದ್ದಮ್ಮ, ಚಿಕ್ಕಲಿಂಗೇಗೌಡ ಮತ್ತು ಸಿದ್ದಮ್ಮರವರ ವಾರಸುದಾರರನ್ನು ಈ ದಾವೆಗೆ ಸೇರಿಸಿಲ್ಲ. ನನ್ನ ತಾಯಿ ಹೆಸರನ್ನು ವಾದ ಪತ್ರದ ವಂಶವೃಕ್ಷದಲ್ಲಿ ಬರೆಸಲು ತೊಂದರೆ ಇರಲಿಲ್ಲ. ನನ್ನ ವಾದ ಪತ್ರದ ಖಂಡಿಕೆ 2 ರಲ್ಲಿ ನಮೂದಿಸಿರುವ ವಂಶವೃಕ್ಷ ಲೋಪದೋಷಗಳಿಂದ ಕೂಡಿದೆ ಎಂದರೆ ಸರಿಯಲ್ಲ.

ನನ್ನ ತಂದೆ ಹೆಸರು ದೊಡ್ಡಲಿಂಗೇಗೌಡ ಅಲಿಯಾಸ್ ಲಿಂಗೇಗೌಡ ಎಂದು ಕರೆಯುತ್ತಿದ್ದರು ಎಂದು ತೋರಿಸಲು ಆರ್.ಟಿ.ಸಿ ಯನ್ನು ಹಾಜರುಪಡಿಸಿದ್ದೇನೆ. ಆರ್.ಟಿ.ಸಿ ಯಲ್ಲಿ ನಾನು ಹೇಳಿದಂತೆ ನನ್ನ ತಂದೆ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದ ಖಂಡಿಕೆ 3 ರಲ್ಲಿ ನಮೂದಿಸಿರುವ ಮಂಜೂರಾತಿ ಪತ್ರವನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು, ಸಾಗುವಳಿ ಪತ್ರವನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಸಾಗುವಳಿ ಪತ್ರ ನನ್ನ ಬಳಿ ಇಲ್ಲದ ಕಾರಣ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸರ್ಕಾರದವರು ಯಾರಿಗೂ ಸಾಗುವಳಿ ಪತ್ರವನ್ನು ವಿತರಿಸಿಲ್ಲ ಎಂದು ನುಡಿಯುತ್ತಾರೆ. ಸಣ್ಣೇಗೌಡರವರ ತಂದೆ ಸಿದ್ದೇಗೌಡ ಮತ್ತು ನನ್ನ ತಂದೆ ದೊಡ್ಡಲಿಂಗೇಗೌಡ 70 ವರ್ಷಗಳಿಂದ ದಾವಾ ಸ್ವತ್ತಿನಲ್ಲಿ ಜಂಟಿಯಾಗಿ ಸ್ವಾಧೀನದಲ್ಲಿದ್ದರು ಎಂದು ತೋರಿಸಲು ಆರ್.ಟಿ.ಸಿ ಯನ್ನು ಹಾಜರುಪಡಿಸಿದ್ದೇನೆ.

ಸರ್ವೇ ನಂಃ 376 ರಲ್ಲಿ ಒಟ್ಟು 8 ಎಕರೆ ಜಮೀನನ್ನು ನನ್ನ ತಂದೆ ಮತ್ತು ಸಣ್ಣೇಗೌಡ ರವರು ಜಂಟಿ ಸ್ವಾಧೀನದಲ್ಲಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ದಾವಾ ಸ್ವತ್ತು ಕೇವಲ 4 ಎಕರೆ ಇತ್ತು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಸರ್ಕಾರದವರು ಜಮೀನನ್ನು ಮಂಜೂರು ಮಾಡಿದ್ದರು ಎಂದು ತೋರಿಸಲು ಸಾಗುವಳಿ ಪತ್ರವನ್ನು ಹಾಜರುಪಡಿಸಿಲ್ಲ. ಕಾರಣ ಸಾಗುವಳಿ ಪತ್ರವನ್ನು ವಿತರಿಸಿಲ್ಲ. ಸರ್ವೇ ನಂಃ 376/15 ಎಂದು ಹೇಗೆ ಆರ್.ಟಿ.ಸಿ ಬದಲಾವಣೆಯಾಯಿತು ಎಂಬ ಬಗ್ಗೆ ದಾಖಲೆ ನೀಡಿಲ್ಲ. ಸರ್ವೇ ನಂಃ 376/1 ಎಂದು ಹೇಗೆ ಆರ್.ಟಿ.ಸಿ ಬದಲಾವಣೆಯಾಯಿತು ಎಂಬ ಬಗ್ಗೆ ದಾಖಲೆ ನೀಡಿಲ್ಲ. ಸಣ್ಣೇಗೌಡ ನನ್ನ ತಂದೆಯ ಸಹೋದರ ಎಂದು ತೋರಿಸಲು ಆರ್.ಟಿ.ಸಿ ಯನ್ನು ಮಾತ್ರ ಹಾಜರುಪಡಿಸಿದ್ದೇನೆ. ದಿಃ 20.10.1980 ರ ವಿಲ್ ನ್ನು ಹಾಜರುಪಡಿಸಿಲ್ಲ. ಸಣ್ಣೇಗೌಡರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ.

ಸಣ್ಣೇಗೌಡರ ಕುಟುಂಬಕ್ಕೂ ನಮ್ಮ ಕುಟುಂಬಕ್ಕೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಣ್ಣೇಗೌಡರ ತಂದೆ ಹೆಸರನ್ನು ಸಿದ್ದೇಗೌಡ ಅಲಿಯಾಸ್ ಸಿರಗೇಗೌಡ ಅಲಿಯಾಸ್ ಈರೇಗೌಡ ಎಂದು ಕರೆಯುತ್ತಿದ್ದರು ಎಂದರೆ ಸರಿ. ಸಣ್ಣೇಗೌಡ ಮತ್ತು ಕಾಳಮ್ಮ ರವರಿಗೆ

ಯಾವುದೆ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಸಣ್ಣೇಗೌಡರವರ ಅಣ್ಣ ಕಾಳೇಗೌಡ ಎಂದರೆ ಸರಿಯಲ್ಲ. ಅವರು ಕನ್ನೆಗಾಲ ಎಂಬ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಸಣ್ಣೇಗೌಡ ಕಾಳೇಗೌಡರ ತಮ್ಮನಾಗಿದ್ದು, ಆತ ಸಿದ್ದಯ್ಯನ ಹುಂಡಿಯಿಂದ ನಮ್ಮ ಗ್ರಾಮಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಸಣ್ಣೇಗೌಡರು ಮೃತ ಹೊಂದಿದ್ದು, ಅವರ ನಂತರ ಅವರ ಹೆಂಡತಿ ಚಿಕ್ಕಕಾಳಮ್ಮ ಮೃತ ಹೊಂದಿದ್ದು ಮತ್ತು ಅವರ ಏಕೈಕ ಮಗಳು ಮಹದೇವಮ್ಮ ಸಹ ಮೃತ ಹೊಂದಿದ್ದು ಅವರ ಅಂತ್ಯಕ್ರೀಯೆಯನ್ನು ಪ್ರತಿವಾದಿಗಳು ಮಾಡಿದ್ದರು ಎಂದರೆ ಸರಿಯಲ್ಲ.

ಸಣ್ಣೇಗೌಡರಿಗೆ ಮಕ್ಕಳು ಇಲ್ಲದ ಕಾರಣ ಅವರ ಅಣ್ಣ ಕಾಳೇಗೌಡರವರ ಮಕ್ಕಳಾದ ಪ್ರತಿವಾದಿಗಳೆ ಸಣ್ಣೇಗೌಡ ವಾರಸುದಾರರು ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಣ್ಣೇಗೌಡ ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಅವರು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದವರು ಎಂದರೆ ಸರಿಯಲ್ಲ. ಮೃತ ಸಣ್ಣೇಗೌಡ ಪ್ರತಿವಾದಿಗಳ ಚಿಕ್ಕಪ್ಪ ಎಂದರೆ ಸರಿಯಲ್ಲ. ಮೃತ ಸಣ್ಣೇಗೌಡರವರ ಅಂತ್ಯಕ್ರೀಯೆಯನ್ನು ಪ್ರತಿವಾದಿಗಳೆ ನೇರವೇರಿಸಿದ್ದರು ಅದು ಗ್ರಾಮಸ್ಥರಿಗೂ ಗೊತ್ತು ಎಂದರೆ ಸರಿಯಲ್ಲ. ಪ್ರತಿವಾದಿ ಸಣ್ಣೇಗೌಡರ ವಾರಸುದಾರರಾದ ಕಾರಣ ದಾವಾ ಸ್ವತ್ತನ್ನು ಖಾತಾ ಮಾಡಿಕೊಡುವಂತೆ ತಹಶೀಲ್ದಾರ್ ರವರ ಕಛೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಗೆ ನಾನು ತಕರಾರು ಸಲ್ಲಿಸಿದ್ದೆ, ಅದರಂತೆ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಸೂಚನೆ ನೀಡಿದ್ದರು ಎಂದರೆ ಸರಿಯಲ್ಲ.

ಅದರಂತೆ ಪ್ರತಿವಾದಿ ಓ.ಎಸ್.38/2020 ನ್ನು ದಾಖಲಿಸಿ ವಿಭಾಗಾಂಶದ ಡಿಕ್ರಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಗಳ ಪರವಾಗಿ ಡಿಕ್ರಿಯಾಗಿದೆ ಎಂದರೆ ನನಗೆ ತಿಳಿಯದೆ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಡಿಕ್ರಿಯಾದಾಗ ಲಾಕ್‌ಡೌನ್ ಇತ್ತು ಅದಕ್ಕೆ ಅದನ್ನು ಪ್ರಶ್ನಿಸಿಲ್ಲ. ದಾವಾ ಸ್ವತ್ತಿನ ಮೇಲೆ ನನ್ನ ಹಕ್ಕು ಮತ್ತು ಸ್ವಾಧೀನ ತೋರಿಸಲು ನಿಖರ ದಾಖಲೆಗಳನ್ನು ಹಾಜರುಪಡಿಸಿದ ಕಾರಣ ನಾನು ದಾವಾ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಸಹೋದರ ಸಣ್ಣೇಗೌಡ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಪ್ರತಿವಾದಿಗಳ ಚಿಕ್ಕಪ್ಪನಿಗೆ ಸಂಬಂಧಪಟ್ಟದ್ದು ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಪ್ರತಿವಾದಿ

ಮಾಲೀಕರು ಎಂದರೆ ಸರಿಯಲ್ಲ. ಪ್ರತಿವಾದಿಗಳಿಂದ ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಪ್ರತಿವಾದಿಗಳಿಗೂ ಮತ್ತು ನನಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ